**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆ ಮೇಲಿನ ಹೇಳಿಕೆ**

ವಿಷಯ:- ರಾಜ್ಯದಲ್ಲಿ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರನ್ನು ಪೂರೈಸುವ ಮಹತ್ವದ ಉದ್ದೇಶದಿಂದ ನೀರನ್ನು ಶುದ್ಧೀಕರಿಸುವ ಘಟಕಗಳನ್ನು ಸ್ಥಾಪಿಸಿದ್ದರೂ ಬಹಳ ಘಟಕಗಳು ಕಾರ್ಯ ನಿರ್ವಹಿಸದೇ ದುರಸ್ತಿ ಬಂದಿದ್ದು, ಈ ಘಟಕಗಳನ್ನು ಸರಿಪಡಿಸಲು ಕ್ರಮ ಜರುಗಿಸದಿರುವ ಬಗ್ಗೆ.

*******

**ಹೇಳಿಕೆ :-**

- ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನೀರು ಶುದ್ಧೀಕರಣ ಘಟಕಗಳು ಒಟ್ಟು 18728 ಘಟಕಗಳು ಅನುಷ್ಠಾನಗೊಳಿಸಲಾಗಿದ್ದು, 17190 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 1538 ತಾತ್ಕಾಲಿವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ (ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ).
- ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 91 ನೀರು ಶುದ್ಧೀಕರಣ ಘಟಕಗಳು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ.
- ತಾತ್ಕಾಲಿಕವಾಗಿ ದುರಸ್ಥಿಯಲ್ಲಿರುವ, ಎಲ್ಲಾ ಘಟಕಗಳನ್ನು ಗ್ರಾ.ಕು.ನೀ.&ನೈ ಇಲಾಖೆಯ ವತಿಯಿಂದ ಟಾಸ್ಕ್‌ಫೋರ್ಸ್ ಹಾಗೂ ಇಲಾಖೆಯ ಇತರೆ ಅನುದಾನದಡಿ ಮತ್ತು ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುವ ಅನುದಾನ ಬಳಸಿಕೊಂಡು, ಸುಸ್ಥಿತಿಯಲ್ಲಿರಿಸಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ.
- Defect Liability Period ಮುಗಿಯುವುದರೊಳಗೆ ಕಾರ್ಯನಿರ್ವಹಿಸದೇ ಇದ್ದಲ್ಲಿ, ಅಂತಹ ಘಟಕಗಳನ್ನು ಸ್ಥಾಪಿಸಿದ ಏಜೆನ್ಸಿರವರು ಘಟಕಗಳನ್ನು ಸುಸ್ಥಿತಿಯಲ್ಲಿಡಲು ಕ್ರಮವಹಿಸದಿದ್ದಲ್ಲಿ, ಕರಾರಿನಂತೆ ನೋಟೀಸ್‌ಗಳನ್ನು ನೀಡಿ Rescind ಮಾಡಲಾಗುತ್ತಿದೆ ಹಾಗೂ ಸದರಿ ಘಟಕಗಳನ್ನು ನಿಯಮಾನುಸಾರ ಇಲಾಖಾ ವತಿಯಿಂದ ಸರಿಪಡಿಸಿ ಕಾರ್ಯನಿರ್ವಹಿಸುವಂತೆ ಕ್ರಮಜರುಗಿಸಲಾಗುತ್ತಿದೆ.
- ಶುದ್ಧ ಕುಡಿಯುವ ನೀರಿನ ಘಟಕಗಳು ಕ್ರಮಬದ್ಧವಾಗಿ ಕಾರ್ಯನಿರ್ವಹಿಸುವಂತೆ ಅನುವಾಗಲು ಅನುದಾನವನ್ನು ರಾಜ್ಯದ ವಂತಿಗೆಯಲ್ಲಿ ನಿಗಧಿಪಡಿಸಲಾಗಿದೆ. ಗ್ರಾಮ ಪಂಚಾಯಿತಿಗಳು 15ನೇ ಹಣಕಾಸಿನ ಆಯೋಗದಲ್ಲಿ ಲಭ್ಯವಿರುವ ಅನುದಾನ ಅಥವಾ ಗ್ರಾಮ ಪಂಚಾಯಿತಿ ಅನುದಾನವನ್ನು ಸಹ ಬಳಸಬಹುದಾಗಿರುತ್ತದೆ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗಾಗಿ ಪ್ರತಿ ಘಟಕಕ್ಕೆ ತಿಂಗಳಿಗೆ ರೂ.3,000/-ಗಳಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಕಡತ ಸಂ:ಗ್ರಾಕುನೀ&ನೈಇ 162 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

**ಕೆ.ಎಸ್. ಈಶ್ವರಪ್ಪ**
**ಗ್ರಾಮೀಣಾಭಿವೃದ್ಧಿ ಮತ್ತು**
**ಪಂಚಾಯತ್ ರಾಜ್ ಸಚಿವರು**

## Annexure ಅನುಬಂಧ

| Sl. No. | District \ Division | No. of Plants Commissioned | No. of Plants Working | No. of Plants Not Working |
|---|---|---|---|---|
| 1 | Bagalkot | 780 | 707 | 73 |
| 2 | Bangalore Rural | 688 | 677 | 11 |
| 3 | Bangalore Urban | 714 | 660 | 54 |
| 4 | Belagavi / Chikodi | 1330 | 1239 | 91 |
| 5 | Bellary | 1129 | 1087 | 42 |
| 6 | Bidar | 291 | 189 | 102 |
| 7 | Chamarajnagar | 181 | 174 | 7 |
| 8 | Chikkaballapur | 734 | 714 | 20 |
| 9 | Chikkamagalur | 216 | 195 | 21 |
| 10 | Chitradurga | 1052 | 974 | 78 |
| 11 | Dakshina Kannada | 125 | 60 | 65 |
| 12 | .Davangere | 1343 | 1316 | 27 |
| 13 | Dharwad | 467 | 412 | 55 |
| 14 | Gadag | 439 | 421 | 18 |
| 15 | Hassan | 454 | 446 | 8 |
| 16 | Haveri | 750 | 716 | 34 |
| 17 | Kalaburgi | 442 | 300 | 142 |
| 18 | Kodagu | 36 | 26 | 10 |
| 19 | Kolar | 1077 | 1067 | 10 |
| 20 | Koppal | 666 | 523 | 143 |
| 21 | Mandya | 709 | 695 | 14 |
| 22 | Mysore | 606 | 548 | 58 |
| 23 | Ramanagar | 578 | 566 | 12 |
| 24 | Raichur | 616 | 560 | 56 |
| 25 | Shimoga | 255 | 251 | 4 |
| 26 | .Tumkur | 1508 | 1404 | 104 |
| 27 | Udupi | 59 | 56 | 3 |
| 28 | Uttar Kannada | 234 | 205 | 29 |
| 29 | Vijayapura | 834 | 647 | 187 |
| 30 | Yadgir | 415 | 355 | 60 |
| **Total** | | **18728** | **17190** | **1538** |